

**ಜಪಾನ್‌ನ ಉದ್ಯಾನಗಳು ಮತ್ತು ಬಯಲಿನಲ್ಲೀಗ ಚೆರ್ರಿ ಹೂಗಳ ಮೆರವಣಿಗೆ. ಆದರೆ, ಕೋವಿಡ್–19 ಭಯದಲ್ಲಿ ಪ್ರಕೃತಿಯ ಸೌಂದರ್ಯವೇ ಕಳೆಗುಂದಿದಂತಿದೆ.**

ಎನ್95 ರೆಸ್ಪಿರೇಟರ್ ಹೆಚ್ಚು ಪರಿಣಾಮಕಾರಿ. ಇದಕ್ಕೆ ಪರ್ಸೆಂಟ್ ವೈರಸ್, ಬ್ಯಾಕ್ಟೀರಿಯಾಗಳು ಸೇರಿದಂತೆ ಅತಿ ಸಣ್ಣ (0.3 ಮೈಕ್ರಾನ್) ಕಣಗಳನ್ನು ತಡೆಹಿಡಿಯುವ ಸಾಮರ್ಥ್ಯವಿದೆ. ಕೋವಿಡ್–19 ರೋಗಪೀಡಿತ ವ್ಯಕ್ತಿ ಸರ್ಜಿಕಲ್ ಮಾಸ್ಕ್ ಧರಿಸಿದರೆ ಸಾಕು. ಆದರೆ ಕೋವಿಡ್–19 ರೋಗಿಯನ್ನು ನೋಡಿಕೊಳ್ಳುವವರು ಎನ್95 ರೆಸ್ಪಿರೇಟರ್ ಬಳಸಬೇಕು.

### ಪರೀಕ್ಷಿಸುತ್ತಿದ್ದಾಳೆ ಹತ್ತಿರದಿಂದ ದಿಟ್ಟಿಸುತ್ತಿದೆ ಸಾವು

ಮಾರ್ಚ್ 6, 2020ರ 'ಐ.ಸಿ.ಎಂ.ಆರ್.' (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) ಪತ್ರಿಕಾ ಪ್ರಕಟಣೆಯ ಪ್ರಕಾರ ಈ ಕೆಳಕಂಡ ಮೂರು ವಿಧದ ರೋಗಿಗಳಿಗೆ ಕೋವಿಡ್–19 ವೈರಸ್ ಪತ್ತೆಹಚ್ಚುವ ಪ್ರಯೋಗವನ್ನು ಮಾಡಲಾಗುತ್ತದೆ. ಮೊದಲನೆಯವರು ಜ್ವರ, ಕೆಮ್ಮು ಹಾಗೂ ಉಸಿರಾಟದ ತೊಂದರೆ ಇರುವ, ಕೋವಿಡ್–19 ರೋಗ ಹರಡಿರುವ ದೇಶಗಳಿಂದ ಬಂದವರು. ಎರಡನೇ ಗುಂಪಿಗೆ ಸೇರಿದವರು, ಕೋವಿಡ್–19 ಖಚಿತವಾಗಿರುವ ರೋಗಿಗಳ ಜೊತೆ ಇರುವವರು. ಮೂರನೆಯವರು, ಚೀನಾದ ವುಹಾನ್‌ನಿಂದ ಬಂದು ಕ್ವಾರಂಟೈನ್‌ಗೆ ಒಳಗಾದವರು. ಇವರ ಗಂಟಲಿನಿಂದ ಹಾಗೂ ಮೂಗಿನಿಂದ (ಥ್ರೋಟ್ ಸ್ವಾಬ್, ನೇಸಲ್ ಸ್ವಾಬ್) ತೆಗೆದ ಸ್ಯಾಂಪಲ್‌ಗಳನ್ನು ರಿಯಲ್ ಟೈಮ್ ಪಿ.ಸಿ.ಆರ್. ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಪುಣೆಯ ಎನ್.ಐ.ವಿ. (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ) ಮಾರ್ಗದರ್ಶನದಲ್ಲಿ ದೇಶದಲ್ಲಿರುವ ವಿ.ಆರ್.ಡಿ.ಎಲ್. (ವೈರಲ್ ರಿಸರ್ಚ್ ಡಯಾಗ್ನೊಸ್ಟಿಕ್ ಲ್ಯಾಬೊರೇಟರಿ) ಪ್ರಯೋಗಾಲಯಗಳು ಈ ಪರೀಕ್ಷೆಗಳನ್ನು ಮಾಡುತ್ತವೆ. ದೇಶದಲ್ಲಿ ಕೋವಿಡ್–19 ಪತ್ತೆಹಚ್ಚುವ ಒಟ್ಟು 57 ವಿ.ಆರ್.ಡಿ.ಎಲ್. ಪ್ರಯೋಗಾಲಯಗಳಿವೆ. ಕರ್ನಾಟಕದಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಫೀಲ್ಡ್ ಯುನಿಟ್ ಬೆಂಗಳೂರು, ಮೈಸೂರು ಮೆಡಿಕಲ್ ಕಾಲೇಜು, ಹಾಸನ ಮೆಡಿಕಲ್ ಕಾಲೇಜು ಹಾಗೂ ಶಿವಮೊಗ್ಗ ಮೆಡಿಕಲ್ ಕಾಲೇಜುಗಳು ಕೋವಿಡ್–19 ಪತ್ತೆ ಕಾರ್ಯದಲ್ಲಿ ತೊಡಗಿವೆ.

### ನಿರಂತರ ಹೋರಾಟ ಎಲ್ಲೆಲ್ಲೂ ಸರ್ವಾಧಿಕಾರಿಗಳು ಕೊರೊನಾ ವೈರಸ್

ಈ ಲೇಖನ ಬರೆಯುವ ವೇಳೆಗೆ 'ಜಾಗತಿಕ ಆರೋಗ್ಯ ಸಂಸ್ಥೆ' ಕೋವಿಡ್–19 ರೋಗವನ್ನು 'ಗ್ಲೋಬಲ್ ಪ್ಯಾಂಡೆಮಿಕ್' (ಜಾಗತಿಕ ಆಪತ್ತು) ಎಂದು ಘೋಷಿಸಿದೆ. ಪ್ಯಾಂಡೆಮಿಕ್ ಎಂದರೆ ಇಡೀ ಜಗತ್ತಿನೆಲ್ಲೆಡೆ ಹರಡಿದ ರೋಗ ಎಂದರ್ಥ. ಎಷ್ಟೋ ಸರ್ವಾಧಿಕಾರಿಗಳನ್ನು ಕಂಡ ಈ ಜಗತ್ತಿಗೆ ಈ ಸರ್ವಾಧಿಕಾರಿಯನ್ನು ಎದುರಿಸುವುದು ಕಷ್ಟವಾಗಬಾರದು. ಈಗ ಮನುಷ್ಯರು ಮೇಲು ಕೀಳೆನ್ನದೆ ಒಂದಾಗಿ ನಿರಂತರ ಹೋರಾಟ ನಡೆಸಬೇಕಾಗಿದೆ. ಪರಿಸರವನ್ನು ನಾಶ ಮಾಡುತ್ತಿರುವ ನಮಗೆ ಈಗ ನಮ್ಮನ್ನು ನಾವು ಉಳಿಸಿಕೊಳ್ಳುವ ಸವಾಲು ಎದುರಾಗಿದೆ. ಈವರೆಗೆ ಜಗತ್ತಿನಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಖಚಿತ ಕೋವಿಡ್–19 ರೋಗಿಗಳ ಪತ್ತೆಯಾಗಿದೆ. ಸುಮಾರು ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ.

ಕೋವಿಡ್–19 ರೋಗವನ್ನು ತಡೆಯಲು ಲಸಿಕೆ ಹಾಗೂ ಗುಣಪಡಿಸಲು ಔಷಧಿಗಳು ಬರುವವರೆಗೆ ಇದನ್ನು ತಡೆಗಟ್ಟಲು ನಾವೆಲ್ಲ ಸಾಮೂಹಿಕ ಪ್ರಯತ್ನ ನಡೆಸಬೇಕಾಗಿದೆ. ಯಾವುದೇ ಆಯುರ್ವೇದ, ಯುನಾನಿ ಔಷಧಿಗಳು, ಗೋಮೂತ್ರ, ಬೆಳ್ಳುಳ್ಳಿ ತೆಗೆದುಕೊಳ್ಳುವುದರಿಂದ ಈ ರೋಗ ವಾಸಿಯಾಗುವ ಯಾವ ಪುರಾವೆಗಳೂ ಇಲ್ಲ. ಇದು ಹೊಸ ವೈರಸ್. ನಾವು ಮನುಷ್ಯರು ಹೊಸ ದಾರಿಗಳನ್ನು ಹುಡುಕಬೇಕಿದೆ.

ಕೊರೊನಾ ವೈರಸ್ ಮನುಕುಲಕ್ಕೆ ಎದುರಾಗಿರುವ ಮಹಾ ಮಾರಿ ಎನ್ನುವುದರಲ್ಲಿ ಅನುಮಾನವೇನೂ ಇಲ್ಲ. ಈ ದುಃಸ್ವಪ್ನದಲ್ಲೂ ನಾವು ಕೆಲವು ಪಾಠಗಳನ್ನು ಕಲಿಯುವುದಕ್ಕೆ ಅವಕಾಶವಿದೆ. ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವ ಮಾತು ಕೊರೊನಾ ವೈರಸ್‌ಗಳನ್ನು ಮಣಿಸುವುದಕ್ಕೂ ಅನ್ವಯವಾಗುತ್ತದೆ. ಅದರ ಜೊತೆಗೆ, ಪರಿಸರದಲ್ಲಿ ಮಿತಿಮೀರಿರುವ ನಮ್ಮ ಹಸ್ತಕ್ಷೇಪದ ಕುರಿತು ಯೋಚಿಸಲೂ ಈ ವೈರಸ್ ಅವಕಾಶ ಕಲ್ಪಿಸಿದೆ. ಕೊರೊನಾಗೆ ಔಷಧಿ ಕಂಡುಹಿಡಿಯುವುದೆಂದರೆ ವೈರಸ್‌ಗೆ ಪ್ರತಿರೋಧ ಕಂಡುಕೊಳ್ಳುವುದು ಎಂದಷ್ಟೇ ಆಗಬಾರದು. ಅದು ನಮ್ಮ ಜೀವನಪದ್ಧತಿ ಹಾಗೂ ಮನೋಧರ್ಮದ ಬದಲಾವಣೆಗೂ ಔಷಧಿಯಾಗಿ ಪರಿಣಮಿಸಬೇಕು.

ಲೇಖಕರು 'ಮೈಸೂರು ವೈದ್ಯಕೀಯ
ಮಹಾವಿದ್ಯಾಲಯ ಹಾಗೂ ಸಂಶೋಧನಾ
ಸಂಸ್ಥೆ'ಯಲ್ಲಿ ಸಹ ಪ್ರಾಧ್ಯಾಪಕರು